
ಎರಡು ದಶಕಗಳ ಕಾಲ 'ಸೀಗಲ್ ಬುಕ್ಸ್' ವತಿಯಿಂದ ನಾನು ಮುಂದುವರೆಸಿದೆ. 'ಭಾರತದ ಹೊಸ ನಾಟಕಕಾರರು' ಶೀರ್ಷಿಕೆಯಲ್ಲಿನ ಕೆ.ಎನ್. ಪಣಿಕ್ಕರ್, ಚಂದ್ರಶೇಖರ ಕಂಬಾರ, ಎಚ್. ಎಸ್. ಶಿವಪ್ರಕಾಶ್, ರತನ್ ತಿಯಮ್, ಹೈಸಮ್ ಕನ್ಹಯಲಾಲ್, ಹಬೀಬ್ ತನ್ವೀರ್, ಮನೋಜ್ ಮಿತ್ರ, ಭೀಷ್ಮ ಸಹಾನಿ, ಶಾಂತಾ ಗೋಖಲೆ, ಮಹೇಶ್ ಎಲಕುಂಚಾರ್, ಸತೀಶ್ ಅಲೇಕರ್ ಅವರ ನಾಟಕಗಳು, ಭಾರತೀಯ ಭಾಷೆಗಳ ನಡುವೆ ಸಂವಹನ ಹಾಗೂ ಹಲವು ಭಿನ್ನ ಸಂಸ್ಕೃತಿಗಳನ್ನು ಅರ್ಥ ಮಾಡಿಕೊಳ್ಳಲು ನೆರವಾದವು. ಭಾರತದ ರಂಗಭೂಮಿ ವೈವಿಧ್ಯದ ಪಾಲನೆ ಪೋಷಣೆಗೆ ಅನುವು ಮಾಡಿಕೊಟ್ಟ ಈ ರಂಗಪಯಣ ನಮ್ಮ ದೇಶವನ್ನು ತುಂಬಾ ಆಸಕ್ತಿಕರವಾಗಿ ಇರುವಂತೆ ಮಾಡಿತು.

ಭಾರತೀಯ ಹೊಸ ನಾಟಕಗಳಿಗೆ ಸಂಬಂಧಿಸಿದಂತೆ 'ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್' ತನ್ನ ಪಟ್ಟಿಯನ್ನು ಪುನರುಜ್ಜೀವನಗೊಳಿಸಿದಾಗ, ಭಾರತದಲ್ಲಿನ ರಂಗಭೂಮಿ ಇತಿಹಾಸ ಗಮನಾರ್ಹ ಬದಲಾವಣೆಯನ್ನು ಪಡೆಯಿತು ಹಾಗೂ ಆ ಬದಲಾವಣೆಯಲ್ಲಿ ಗಿರೀಶ್ ಅವರ ಛಾಪು ಮೂಡಿತ್ತು. ನನ್ನ ಸಮೃದ್ಧ ನೆನಪುಗಳನ್ನು ಕೆದಕುವುದಾದರೆ – ತೆಂಡೂಲ್ಕರ್, ಎಲಕುಂಚೂರ್ ಮತ್ತು ಅಲೇಕರ್ ಅವರ 'ಆಯ್ದ ನಾಟಕಗಳನ್ನು' ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ಗೆ ಪರಿಚಯಿಸುವಂತೆ ಕೇಳಿಕೊಳ್ಳಲಾಯಿತು. ಅದೇ ಸಮಯಕ್ಕೆ, 2005ರಲ್ಲಿ, ತಮ್ಮ ಆಯ್ದ ನಾಟಕಗಳ ಎರಡು ಸಂಪುಟಗಳ ಬಿಡುಗಡೆಗಾಗಿ ಗಿರೀಶರು ನನ್ನನ್ನು ಬೆಂಗಳೂರಿಗೆ ಆಹ್ವಾನಿಸಿದರು. ಕಾಕತಾಳೀಯ ಎನ್ನುವಂತೆ ಅದು ಹೆಗ್ಗೋಡಿನ ವಾರ್ಷಿಕ ಶಿಬಿರದ ಸಂದರ್ಭವೂ ಆಗಿತ್ತು. ಕೆಲವು ವರ್ಷಗಳಿಂದ ನಾನು ಆ ಶಿಬಿರದ ಸಂಪನ್ಮೂಲ ವ್ಯಕ್ತಿಯಾಗಿದ್ದೇನೆ. ಬೆಂಗಳೂರಿನ ಪುಸ್ತಕದ ಅಂಗಡಿಯೊಂದರಲ್ಲಿ ನಡೆದ ಸುದೀರ್ಘ ಮುಕ್ತ ಮಾತುಕತೆಯ ಕೊನೆಗೆ ಕಾರ್ನಾಡರು, ತಮ್ಮ ಸಹಿಯುಳ್ಳ ಸಂಪುಟಗಳನ್ನು ನನಗೆ ನೀಡಿದರು. ಎರಡನೇ ಸಂಪುಟದಲ್ಲಿ ಅವರು ಬರೆದಿದ್ದುದು ಹೀಗೆ – **'For Samik, with thanks for making this day so memorable. Girish. 16.10.05.'** (ಶಮೀಕ್ ಅವರಿಗೆ, ಈ ದಿನವನ್ನು ಬಹು ಸ್ಮರಣೀಯವನ್ನಾಗಿ ಮಾಡಿದ್ದಕ್ಕೆ ಧನ್ಯವಾಗಳೊಂದಿಗೆ. ಗಿರೀಶ್. 16.10.05.)



ಕೋಲ್ಕತ್ತ ಮೂಲದ ಶಮೀಕ್ ಬಂದೋಪಾಧ್ಯಾಯ – ಭಾರತೀಯ ಕಲೆ, ರಂಗಭೂಮಿ ಮತ್ತು ಸಿನಿಮಾ ವಿಮರ್ಶಕರಾಗಿ ಪ್ರಸಿದ್ಧರು.

ಗಿರೀಶ್ ಜೊತೆಗಿನ ನನ್ನ ಸಂಬಂಧ ಸಿನಿಮಾ ಮತ್ತು ರಂಗಭೂಮಿಯ ಜೊತೆಗೆ ಬೆಳೆದಿರುವಂತಹದ್ದು. ಎರಡು ವರ್ಷಗಳ ಹಿಂದೆ, ಸತ್ಯಜಿತ್ ರೇ ಅವರ ಪತ್ರಗಳ ಸಂಗ್ರಹವನ್ನು ಸಂಪಾದಿಸುತ್ತಿದ್ದಾಗ ಆಸಕ್ತಿಕರ ವಿಷಯವೊಂದು ನನ್ನ ಗಮನಸೆಳೆಯಿತು. ಆದಾಯ ತೆರಿಗೆ ಆಯುಕ್ತನಾಗಿದ್ದ ತಮ್ಮ ಗೆಳೆಯ ಕಿರಣ್ಮಯ್ ರಹಾ ಅವರಿಗೆ 1972ರ ಜನವರಿ 26ರಂದು ರೇ ಅವರು ಬರೆದ ಪತ್ರದಲ್ಲಿ, "ಸಂಸ್ಕಾರ ಚಿತ್ರವನ್ನು ನೋಡುವ ಅವಕಾಶ ನನಗೆ ದೊರೆಯಿತು. ನಟನೆಗೆ ಸಂಬಂಧಿಸಿದಂತೆ ಆ ಚಿತ್ರದಲ್ಲಿ ಗಮನಸೆಳೆಯುವ ಸಂಗತಿಗಳಿವೆ. ಗಿರೀಶ್ ಕಾರ್ನಾಡ್ ಅತ್ಯುತ್ತಮವಾಗಿ ನಟಿಸಿದ್ದಾರೆ. ತೆರೆಯ ಮೇಲಿನ ಪಾತ್ರದಲ್ಲಿ ಕಾಣುತ್ತಿದ್ದ ಅವರ ವ್ಯಕ್ತಿತ್ವ ಹಾಗೂ ತೀಕ್ಷ್ಣತೆ, ಮ್ಯಾಕ್ಸ್ ವಾನ್ ಸಿಡೊ (ಸ್ವೀಡಿಷ್ ಮೂಲದ ಫ್ರೆಂಚ್ ನಟ) ಅವರನ್ನು ನೆನಪಿಸಿತು. ಭಾರತೀಯ ಸಿನಿಮಾದಲ್ಲಿ ಇಂಥ ನಟನೆ ತುಂಬಾ ಅಪರೂಪ. ಆದರೆ, ಚಿತ್ರದಲ್ಲಿನ ಎಲ್ಲರ ನಟನೆಯ ವಿಸ್ತಾರ ಸ್ಪಷ್ಟವಾಗಿ ಒಡಮೂಡಿಲ್ಲ. ಕೆಲವು ಬ್ರಾಹ್ಮಣ ಪುರೋಹಿತರ ಮಾದರಿಗಳು ಅತ್ಯುತ್ತಮವಾಗಿವೆ. ಇಬ್ಬರು ಅಥವಾ ಮೂವರು ಮಹಿಳೆಯರ ನಟನೆಯೂ ಚೆನ್ನಾಗಿದೆ. ಕಥೆ ಸಶಕ್ತವಾಗಿದೆ ಮತ್ತು ಗಾಢ ಭಾರತೀಯತೆಯನ್ನು ಹೊಂದಿದೆ. ಇಡೀ ಚಿತ್ರದ ಮೇಲೆ ಗಾಂಭೀರ್ಯದ ಮೊಹರಿದೆ. ಆದರೆ, ಇವೆಲ್ಲವನ್ನು ಮರೆಸುವಂತಹ